ವಿಶ್ವವಾಣಿ ಆರಾಮ

@vishwavaninews

ಬೆಂಗಳೂರು ಮಂಗಳವಾರ 16 | 04 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ



## ಬಿ ಪಾಸಿಟಿವ್

### ತೊರೆದಷ್ಟು ನೋವಿಗೆ ಮುಕ್ತಿ

ನೋವು ಅನ್ನುವುದು ಬದುಕಿನಲ್ಲಿ ಸಹಜವಾದ ಪ್ರತಿಕ್ರಿಯೆ. ನೋವು ಅನುಭವಿಸದವರು ಈ ಜಗತ್ತಿನಲ್ಲಿ ಇರಲು ಅಸಾಧ್ಯ. ಪ್ರತಿಯೊಬ್ಬರು ಒಂದಲ್ಲ ಒಂದು ನೋವಿನಿಂದ ಬಳಲುತ್ತಿರುತ್ತಾರೆ. ನೋವಿನ ರೀತಿ ಬೇರೆ ಆಗಿರುತ್ತದೆ ಅಷ್ಟೇ. ಇದು ಬದುಕಿನಲ್ಲಿ ಕಟ್ಟಿಟ್ಟ ಬುತ್ತಿ. ಅನುಭವಿಸಿಯೇ ತೀರಬೇಕು. ಪೆಟ್ಟು ತಿಂದ ಕಲ್ಲು ಶಿಲೆಯಾಗಿ ರೂಪ ಪಡೆದುಕೊಳ್ಳುತ್ತದೆ ಹಾಗೆ ನೋವು ತಿನ್ನದೇ ಬದುಕನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ ? ನೋವುಗಳೇ ಪಾಠ ಕಲಿಸುತ್ತದೆ ಮತ್ತು ನಮ್ಮನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.



ನೋವುಗಳನ್ನು ಮರೆತು ಬದುಕುವುದು ಅಷ್ಟು ಸುಲಭವಲ್ಲ, ಆದರೆ ಪ್ರತಿಯೊಂದು ಉದಯವಾಗುವ ದಿನಗಳು ಹೊಸತೇ. ನೆನ್ನೆಯ ನೋವುಗಳ ಜತೆಗೆ ಬದುಕು ಸಾಗಿಸುವುದರಿಂದ, ಇಂದಿನ ದಿನವು ದುಃಖದಲ್ಲೇ ಮುಳುಗಿ ಹೋಗುತ್ತದೆ. ಹೊಸ ಬದುಕಿಗೆ ನವ ಹೊಂಬೆಳಕ ಕಿರಣ ಸ್ಪರ್ಶಿಸಲು ನೋವುಗಳ ಮರೆತು ಮುಂದೆ ಸಾಗುತ್ತಿರಬೇಕು. ಕೆಲವೊಂದು ನೋವುಗಳು ಕೆಟ್ಟ ಘಟನೆಗಳು ಮರೆಯಲಾಗದೆ ನಕಾರಾತ್ಮವಾಗಿ ಚಿಂತಿಸಿ, ಮಾನಸಿಕ ಖಿನ್ನತೆಯ ಖಾಯಿಲೆಯಿಂದ ಬಳಲುವಂತೆ ಮಾಡಿಬಿಡುತ್ತದೆ. ಕೆಟ್ಟ ಸ್ಥಿತಿಯ ನೋವು ಬದುಕಲು ಬಿಡುವುದಿಲ್ಲ, ಆ ಸ್ಥಿತಿಯೇ ನಮ್ಮ ಅಸ್ತಿತ್ವವನ್ನು ನುಂಗಿ ಬಿಡುತ್ತದೆ ಮತ್ತು ಬದುಕಿನಲ್ಲಿ ಸೋಲುವಂತೆ ಮಾಡುತ್ತದೆ. ಕಡಲ ಅಲೆಯಂತೆ ಉಕ್ಕುವ ನೋವುಗಳನ್ನು ತಡೆದು ಬದುಕನ್ನು ಕಟ್ಟಿಕೊಳ್ಳಲು ಮನಸು ಮಾಡಬೇಕು. ಮನಸಿದ್ದರೆ ಮಾರ್ಗ, ಯಾವುದು ಕ್ಲಿಷ್ಟಕರವಲ್ಲ ಮನಸು ಮಾಡಬೇಕು ಅಷ್ಟೇ. ಇಂದು ಇರುವ ನೋವು ನಾಳೆ ಇರದು. ಇವತ್ತು ಇದ್ದ ಸಂಕಷ್ಟ ನಾಳೆ ಜೀವಸಲಾರದು ಎನ್ನುವ ಆತ್ಮವಿಶ್ವಾಸ ಬಲವಾಗಿರಬೇಕು. ಯಶಸ್ಸನ್ನು ಕಾಣಲು ಮತ್ತು ಬದುಕಿನಲಿ ಗೆಲುವು ಕಾಣಲು ಮರೆತು ಬದುಕುವುದನ್ನು ಮೊದಲು ಕಲಿಯಬೇಕು. ಸೂಕ್ಷ್ಮ ಮನಸುಳ್ಳವರಿಗೆ ಇದು ಕ್ಲಿಷ್ಟಕರವೇ. ಇದನ್ನು ಮರೆತು ಬದುಕಲು ಬೇರೆ ದಾರಿ ಇಲ್ಲ, ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲೇಬೇಕು.

• ವಾಣಿ ಮೈಸೂರು

## ಲವ್ ಎವೆರಿ ಬಾಡಿ

ಹಸಿರು ಕಣ್ಣುಗಳು ವಿಶ್ವದ ಅತ್ಯಂತ ಅಪರೂಪದ ಕಣ್ಣಿನ ಬಣ್ಣವಾಗಿದೆ. ಪ್ರಪಂಚದಲ್ಲಿ ಕೇವಲ 2 ಪ್ರತಿಶತದಷ್ಟು ಜನರು ನೈಸರ್ಗಿಕವಾಗಿ ಹಸಿರು ಕಣ್ಣುಗಳನ್ನು ಹೊಂದಿದ್ದಾರೆ. ಹಸಿರು ಕಣ್ಣುಗಳು ಆನುವಂಶಿಕ ರೂಪಾಂತರವಾಗಿದ್ದು ಅದು ಕಡಿಮೆ ಮಟ್ಟದ ಮೆಲನಿನ್‌ನ ಪರಿಣಾಮವೂ ಹೌದು. ಐರ್ಲೆಂಡ್,



ಸ್ಕಾಟ್ಲೆಂಡ್ ಮತ್ತು ಉತ್ತರ ಯುರೋಪ್‌ನಲ್ಲಿ ಹಸಿರು ಕಣ್ಣುಗಳನ್ನು ಹೊಂದಿರುವ ಜನರು ಹೆಚ್ಚಾಗಿ ಕಾಣಸಿಗುತ್ತಾರೆ. ವಿಶೇಷವೆಂದರೆ ಇಲ್ಲಿನ ಜನಸಂಖ್ಯೆಯ ಮುಕ್ಕಾಲು ಭಾಗದಷ್ಟು ಜನರು ನೀಲಿ ಅಥವಾ ಹಸಿರು ಕಣ್ಣುಗಳನ್ನು ಹೊಂದಿದ್ದಾರೆ. ಕಣ್ಣಿನ ಬಣ್ಣಕ್ಕೆ ಹದಿನಾರು ಪ್ರತ್ಯೇಕ ಜೀನ್‌ಗಳು ಕಾರಣವೆಂದು ಗುರುತಿಸಲಾಗಿದೆ. ಆದ್ದರಿಂದ, ನಿಮ್ಮ ಹೆತ್ತವರ ಕಣ್ಣಿನ ಬಣ್ಣವೇ ನಿಮಗೂ ಬರಬೇಕೆಂದೇನಿಲ್ಲ.

• ದೇಹಾಭಿ'ಮಾಣಿ


## ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೂರನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com



'ಮಾತು ಮಾತಿಗೆ ತಕ್ಕ, ಮಾತು ಕೋಟಿಗಳುಂಟು, ಮಾತಾಡಿ ಮನಕೆ ಮುನಿಸಕ್ಕು ಮಾತಿನಲಿ ಸೋತವನೆ ಜಾಣ ಸರ್ವಜ್ಞ' ಎನ್ನುವ ಸರ್ವಜ್ಞನ ತ್ರಿಪದಿಯ ನೀತಿಯಂತೆ ಕೆಲವೊಮ್ಮೆ ಮಾತಿಗೆ ಮಾತು ಸೇರಿ, ಕೋಟಿ ವಿಷಯಗಳು ಬಂದು, ವಿಷ ಬೀಜವನ್ನು ಚೆಲ್ಲುವುದಕ್ಕಿಂತ ಮೌನವಾಗಿದ್ದು ಮಾತಿನಲ್ಲಿ ಸೋಲುವುದೇ ಲೇಸು.

# ಮಾತನಾಡುವ ಮುನ್ನ!




ಜೋಷ್ ಮಾತು

• ವಿಕ್ರಮ ಜೋಶಿ

ಹಿಂದೂ ಧರ್ಮದ ಪುರಾಣಗಳಲ್ಲಿ ಬರುವ ನಾರದ ಮುನಿಗಳದ್ದು ಬಹಳ ಅಚ್ಚರಿಯ ವ್ಯಕ್ತಿತ್ವ. ಅವರಿಗೆ ವೈರಿಗಳೇ ಇಲ್ಲ. ನರಕದಲ್ಲೂ ಗೌರವ, ಸ್ವರ್ಗದಲ್ಲೂ ಘನತೆ. ಕೃತ, ತ್ರೇತಾ, ದ್ವಾಪರ ಹೀಗೆ ಎಲ್ಲಾ ಯುಗದಲ್ಲೂ ಇದ್ದಾರೆ; ಬಹುಶಃ ನಮಗೆ ಕಾಣಸದೆ ಇದ್ದರೂ ಕೂಡ, ಕಲಿಯುಗದಲ್ಲೂ ಇರಬಹುದು! ರಾಕ್ಷಸರೊಂದಿಗೆ ಒಡನಾಟವಿಟ್ಟುಕೊಂಡರೂ ದೇವತೆಗಳ ಪರಮ ಮಿತ್ರರು. ದೇವಲೋಕ, ಭೂಲೋಕ, ಸ್ವರ್ಗಲೋಕ ಹೀಗೆ ತ್ರಿಲೋಕ ಸಂಚಾರಿ. ದೂರದರ್ಶನದ ಧಾರವಾಹಿಗಳಲ್ಲಿ ಕಂಡಂತೆ ನಾರಾಯಣ.... ನಾರಾಯಣ... ಎಂದು ವಿಷ್ಣುವಿನ ನಾಮಸ್ಮರಣೆ ಮಾಡುತ್ತಾ ಬ್ರಹ್ಮಾಂಡ ಸುತ್ತುವ ನಾರದರು ಬ್ರಹ್ಮ ಹಾಗೂ ಶಿವನಿಗೂ ತುಂಬಾ ಬೇಕಾದ ಸಾಧು. ರಾಜನ ಅರಮನೆಗೂ ಬರುತ್ತಾರೆ, ಬಡವನ ಗುಡಿಸಲಿಗೂ ಹೋಗುತ್ತಾರೆ. ರಾಮನೂ ಬೇಕು, ರಾವಣನೂ ಗೊತ್ತು. ಹೀಗೆ ಎಲ್ಲ ಕಡೆಯೂ ಇದ್ದು, ಎಲ್ಲರಿಗೂ ಬೇಕಾಗಿ, ಯಾರೊಂದಿಗೂ ವೈರತ್ವ ಕಟ್ಟಿಕೊಳ್ಳದೆ ಹೇಗೆ ನಾರದ ಮುನಿ ಇದ್ದಿರಬಹುದು ಎಂಬುದು ಚಿಂತನೆಗೆ ಅರ್ಹ ವಿಷಯ. ನಾರದ ಮುನಿಗಳ ವಿಶೇಷತೆ ಎಂದರೆ ಅವರ ಮಾತು. ಅದಕ್ಕಿಂತ ಮಿಗಿಲಾಗಿ ಮಾತಾಡುವ ಮುಂಚೆ ಅವರು ತೆಗೆದುಕೊಳ್ಳುವ ಆ ಭಗವಂತನ ನಾಮ ಸ್ಮರಣೆ!

ಸಾಮಾಜಿಕ ಜೀವನ (ಕಾರ್ಪೊರೇಟ್, ಸರ್ಕಾರಿ ನೌಕರಿ, ವೃತ್ತಿಪರ ಕೆಲಸಗಳು, ಇತ್ಯಾದಿ) ಯಾವುದೇ ಇರಲಿ ಅಲ್ಲಿ ಯಶಸ್ಸಿಗೆ ಮೂಲ ಮಾತು. ಭಕ್ತಿ ಭಂಡಾರಿ ಬಸವಣ್ಣನವರು, 'ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು..' ಎಂದು ತಮ್ಮ ವಚನದಲ್ಲಿ ಮಾತಿನ ಬಗ್ಗೆ ಹೇಳುತ್ತಾರೆ. ಮಾತಿನಿಂದ ಲೋಕವನ್ನೇ ಗೆದ್ದ ನಿದರ್ಶನಗಳಿವೆ. ಹಾಗೆಯೇ ಸರ್ವನಾಶ ಆಗಿದ್ದೂ ನಮಗೆಲ್ಲ ಗೊತ್ತಿದೆ. 'ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ' ಎಂಬುದು ಜನಮನವನ್ನು ಗೆದ್ದ ಗಾದೆಯ ಮಾತು. ಸುಮ್ಮನೆ 'ನಾನು ಕೂಡ ಮಾತನಾಡಬೇಕು' ಎಂದು ಮಾತನಾಡಬಾರದು. ಆಡುವ ಮುನ್ನ ಯೋಚಿಸಬೇಕು, ನುಡಿಯುವ ಮೊದಲು ನೋಡಬೇಕು. 'ಮಾತೇ ಮುತ್ತು, ಮಾತೇ ಮೃತ್ಯು, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬಂತೆ ಬುದ್ಧಿವಂತರು ಕಾಳಜಿಯಿಂದ ಇರಬೇಕು.



ಮಾತು ಉಳಿಸಲೂಬಹುದು, ಬೆಳೆಸಲೂಬಹುದು ಹಾಗೆಯೇ ಕೆಡಿಸಲೂಬಹುದು, ಅಳಿಸಲೂಬಹುದು.

### ಮೂರು ಸೆಕೆಂಡುಗಳ ಸೂತ್ರ

ಹಾಗಿದ್ದರೆ ಮಾತಾಡುವ ಮುನ್ನ ಎಷ್ಟು ಹೊತ್ತು ಯೋಚಿಸಬೇಕು? ಅದಕ್ಕೆ ಸರ್ವಜ್ಞ, 'ಹೊತ್ತಿಗೊದಗಿದೆ ಮಾತು ಸತ್ತವನು ಎದ್ದಂತೆ, ಹೊತ್ತಾಗಿ ನುಡಿದ ಮಾತು ಕೈಜಾರಿದಾ, ಮುತ್ತಿನಂತಿಹುದು ಸರ್ವಜ್ಞ' ಎಂದು ಹೇಳುತ್ತಾರೆ. ಹೀಗಾಗಿ ಹೊತ್ತಿಗೆ ಸರಿಯಾಗಿ ನುಡಿಯಬೇಕು – ಹೆಚ್ಚು ಹೊತ್ತೂ ಆಗಬಾರದು, ಗಡಿಬಿಡಿಯನ್ನೂ ಮಾಡಿಕೊಳ್ಳಬಾರದು. ಅವಶ್ಯಕತೆ ಇದ್ದರೆ ಮಾತ್ರ ಮಾತನಾಡಬೇಕು. ಇತ್ತೀಚೆಗೆ ನನ್ನ ಆತ್ಮೀಯರೊಬ್ಬರು 'ಮೂರು ಸೆಕೆಂಡುಗಳ ಸೂತ್ರ'ವನ್ನು ಹೇಳಿ ಕೊಟ್ಟರು. ಅದರ ಪ್ರಕಾರ ಮಾತನಾಡುವುದಕ್ಕೂ ಮುಂಚೆ 'ನಾನು ಏನನ್ನು ಹೇಳಬೇಕು ಎಂದಿದ್ದೇನೆ? ಅದನ್ನು ಹೇಳುವ ಅಗತ್ಯ ಇದೆಯೇ? ಹೇಳದಿದ್ದರೆ ಏನಾಗುವುದು?' ಎಂದು ಮೂರು ಸೆಕೆಂಡ್ ಯೋಚಿಸಬೇಕಂತೆ. ಆ ಮೂರು ಸೆಕೆಂಡ್‌ನಲ್ಲಿ 'ಹೌದು ಮಾತನಾಡಬೇಕು' ಎಂದು ಉತ್ತರ ಬಂದಾಗ ಮಾತ್ರ ಮುಂದುವರಿಯಬೇಕು, ಇಲ್ಲವಾದರೆ ಸುಮ್ಮನಿರಬೇಕು ಎಂದು ಕಿವಿಮಾತೊಂದನ್ನು ಹೇಳಿದರು. ಇದರ ಪ್ರಾಯೋಗಿಕ ಮಹತ್ವ ತುಂಬಾ ಇದೆ. ವಿಶೇಷವಾಗಿ ಸಾಮಾಜಿಕ ವಲಯದಲ್ಲಿರುವ ವ್ಯಕ್ತಿಗಳು ಇದನ್ನು ಪರಿಪಾಲಿಸಲೇ ಬೇಕು. ಮಾತು ಮಾತಿಗೆ ತಕ್ಕ, ಮಾತು ಕೋಟಿ ಗಳುಂಟು, ಮಾತಾಡಿ ಮನಕೆ ಮುನಿಸಕ್ಕು ಮಾತಿನಲಿ ಸೋತವನೆ ಜಾಣ ಸರ್ವಜ್ಞ' ಎನ್ನುವ ಸರ್ವಜ್ಞನ ತ್ರಿಪದಿಯ ನೀತಿಯಂತೆ ಕೆಲವೊಮ್ಮೆ ಮಾತಿಗೆ ಮಾತು ಸೇರಿ, ಕೋಟಿ ವಿಷಯಗಳು ಬಂದು, ವಿಷ ಬೀಜವನ್ನು ಚೆಲ್ಲುವುದಕ್ಕಿಂತ ಮೌನವಾಗಿದ್ದು ಮಾತಿನಲ್ಲಿ ಸೋಲುವುದೇ ಲೇಸು.

### ಮೌನವಾಗಿದ್ದವರೇನು ಸೋತಿಲ್ಲ

ಯಾವುದೇ ವಿಷಯದ ಕುರಿತು ಚರ್ಚೆಯಲ್ಲಿರುವಾಗ ಅಲ್ಲಿ ಮಾತನಾಡಲು ಈ ಮೂರು ಕಾರಣಗಳು ಬೇಕು. ಮೊದಲನೆಯದು – 'ನಾನು ಮಾತನಾಡುವುದರಿಂದ ಏನಾದರೂ ಸಕಾರಾತ್ಮಕ ಅಂಶ ಚರ್ಚೆಯಲ್ಲಿ ಸೇರ್ಪಡೆ ಆಗುತ್ತದೆಯೇ?' ಎನ್ನುವ ಪ್ರಶ್ನೆಗೆ ಉತ್ತರವು 'ಹೌದು' ಎಂದಿರಬೇಕು. ಎರಡನೆಯದು – 'ನಾವು ಮಾತನಾಡದೇ ಹೋದರೆ ಏನಾದರೂ ನಷ್ಟ ಆಗುವುದೇ?' ಎನ್ನುವ ಪ್ರಶ್ನೆಗೆ 'ಹೌದು' ಎನ್ನುವ ಸನ್ನಿವೇಶ ಇರಬೇಕು. ಮೂರನೆಯದಾಗಿ– 'ನಮ್ಮ ಮಾತನಿಂದ ಅಲ್ಲಿದ್ದ ಎಲ್ಲರಿಗೂ ಹಾಗೂ ನಮಗೂ ಲಾಭ ಆಗುವಂತಿದೆಯೇ?' ಈ ಮೂರು ಪ್ರಶ್ನೆಗಳಿಗೆ ಆ ಮೂರು ಸೆಕೆಂಡ್‌ನಲ್ಲಿ 'ಇಲ್ಲ' ಎಂದು ಉತ್ತರ ಬಂದರೆ ಮಾತನಾಡಲು ಹೋಗಬಾರದು. ಕೇವಲ ಮಾತುಗಳಿಂದ ಏನು ಆಗಿಲ್ಲ, ಮೌನವಾಗಿದ್ದವರೇನು ಸೋತಿಲ್ಲ. ಮುತ್ತಿನಂಥ ಮಾತನಾಡಿದವರೇ ಬುದ್ಧಿವಂತರು, ಅವರಿಗೇ ಸಮಾಜದಲ್ಲಿ ಗೌರವವು ಹೆಚ್ಚು. ಈಗ ನಾರದರ ವಿಷಯಕ್ಕೆ ಬರೋಣ. ನೋಡಿ ನಾರದರು ಯಾವಾಗಲೂ ಮಾತನಾಡುವ ಮುನ್ನ 'ನಾರಾಯಣ.. ನಾರಾಯಣ..' ಎನ್ನುತ್ತಿದ್ದರು ಎಂಬುದನ್ನು ನೋಡಿದ್ದೇವೆ. ಕೆಲವೊಮ್ಮೆ ಅವರು ನಾಮಸ್ಮರಣೆ ಮಾಡಿ ಸುಮ್ಮನಿದ್ದ ಸನ್ನಿವೇಶವೂ ಇದೆ. ನನಗನಿಸಿದಂತೆ ನಾರದರು ಹಾಗೆ ನಾಮ ಸ್ಮರಣೆಯನ್ನು ಮೂರು ಗಳಿಗೆಗಳ ಕಾಲ ವಿಚಾರ ಮಾಡುವುದಕ್ಕೆ ಬಳಸುತ್ತಿದ್ದರು ಅಂತ ನನಗೆ ಅನಿಸುತ್ತದೆ. ನಾವೂ ಕೂಡ ಹಾಗೆಯೇ ಮಾಡಬಹುದಲ್ಲ. ನಾರಾಯಣ ಎನ್ನಲೂ ಬಹುದು, ಜೀಸಸ್ ಎನ್ನಲೂ ಬಹುದು, ಅಲ್ಲಾ ಅಂತ ಪೈಗಂಬರನನ್ನೂ ನೆನೆಸಿಕೊಳ್ಳಬಹುದು, ಆದರೆ ಮಾತನಾಡುವ ತುಸು ಯೋಚಿಸಬೇಕು. ನಾರಾಯಣ.. ನಾರಾಯಣ !

# ಹೂವಿನ ಎಸಳುಗಳ ಮಹಾಸ್ಫೋಟ!



• ವಿಶ್ವನಾಥ್ ಬಳುವನೇರಲು

ಗಗನದಿಂದ 8 ಮಿಲಿಯನ್ ಹೂವಿನ ದಳಗಳು ಸುರಿಯುವಾಗ ಅದು ಹೇಗೆ ಕಾಣುತ್ತದೆ? ಒಂದು ಕಾಲ್ಪನಿಕ ಕತೆಯ ದೃಶ್ಯವೊಂದು ಕಣ್ಣೆದುರೇ ಬಂದು, ಅಲ್ಲೋಂದು ಸ್ವರ್ಗೀಯ ವಾತಾವರಣ ಸೃಷ್ಟಿಯಾದಂತೆಯೇ ಸರಿ. ಈ ರೀತಿ ಕೋಸ್ಟರಿಕಾದ ಹಳ್ಳಿಯ ಸನಿಹದ ಇರಾಝು ಅಗ್ನಿ ಪರ್ವತದ ಸನಿಹದಲ್ಲಿ ಎಂಟು ಮಿಲಿಯನ್



ಹೂವಿನ ಎಸಳುಗಳನ್ನು ಸ್ಫೋಟಿಸುವಂತೆ ಮಾಡಿ ಚಿತ್ರೀಕರಣ ಮಾಡಿದ ಸೋನಿ ಜಾಹೀರಾತಿನ ಬಗ್ಗೆ ವಿವಿಧ ರೀತಿಯ ಟೀಕೆಗಳ ಸುರಿಮಳೆಯಾಗಿದೆ.

ಕೋಸ್ಟರಿಕಾದ ಹಳ್ಳಿಯವರ ಸಹಕಾರದೊಂದಿಗೆ 3.5 ಟನ್ ನಿಜವಾದ ಹೂವುಗಳನ್ನು ಎರಡು ವಾರಗಳ ಕಾಲ ಆಯ್ದುಕೊಂಡು ಜ್ವಾಲಾಮುಖಿ ಪರ್ವತದ ಮೇಲೆ ಸ್ಫೋಟಿಸಿದಾಗ ಹಳ್ಳಿಯ ಮೇಲೆ ಹೂವುಗಳ ಸುರಿಮಳೆಯಾಗುವಂತೆ ಆಯೋಜಿಸಲಾಗಿತ್ತು. ಈ ದೃಶ್ಯವನ್ನು ಹಲವಾರು ಹೈಡೆಫನಿಷನ್ ಕ್ಯಾಮೆರಾಗಳಲ್ಲಿ ಸೆರೆ ಹಿಡಿದು ದಾಖಲೆ ಮಾಡಲಾಗಿದೆ. ತಮ್ಮ ಹೊಸ ಲೈನ್ ಟಿವಿಗಳನ್ನು ಪ್ರಚಾರ ಮಾಡಲು, ಬಣ್ಣದ ಹೂವುಗಳು ಇಳೆಗಿಳಿಯುವ ದೃಶ್ಯವನ್ನು ಬಳಸುವುದು ಸೋನಿ ಸಂಸ್ಥೆಯ ಉದ್ದೇಶವಾಗಿತ್ತು.

ಕೇನ್ಸ್‌ನ ಅಂತರರಾಷ್ಟ್ರೀಯ ಜಾಹೀರಾತು ಏಜೆನ್ಸಿಯ ಕಲ್ಪನೆಯನ್ನು ಕ್ಯಾಮೆರಾದಲ್ಲಿ ದಾಖಲಿಸಲು ಮ್ಯಾಕ್ಕಾನ್ ಛಾಯಾಗ್ರಾಹಕ ನಿಕ್ ಮೀಕ್ ಮತ್ತು ಚಲನಚಿತ್ರ ನಿರ್ಮಾಪಕ ಜಾರೋನ್ ಆಲ್ಬರ್ಟಿನ್ ಅವರುಗಳು ಈ ತಂಡವನ್ನು ಸೇರಿಸಿಕೊಂಡರು. ಇದನ್ನು ಯಾವುದೇ ಡಿಜಿಟಲ್ ಕುಶಲತೆಯನ್ನು ಬಳಸದೆ ದಾಖಲಿಸಲಾಯಿತು. ಸೋನಿ 3.5 ಟನ್ನಗಳಷ್ಟು ರೋಮಾಂಚಕ-ಬಣ್ಣದ ಹೂವಿನ ದಳಗಳನ್ನು ಕೈಬಿಟ್ಟು, ತಮ್ಮ ಹೊಸ ಲೈನ್ ಟಿವಿಗಳನ್ನು ಪ್ರಚಾರ ಮಾಡಲು ಮಾಂತ್ರಿಕ ಚಿಗುರುಗಳನ್ನು ರಚಿಸಲು

ಕೆಲವರ ಪ್ರಕಾರ ಇದು ನಾಚಿಕೆಗೇಡಿನ ಸಂಗತಿ. ಇಂದು ತುಂಬಾ ಮುಂದುವರಿದಿರುವ ಡಿಜಿಟಲ್ ತಂತ್ರಜ್ಞಾನದ ಸಾಧ್ಯತೆಗಳನ್ನು ಬಳಸಿಕೊಳ್ಳದೆ ಸ್ವಾರ್ಥದ ವಾಣಿಜ್ಯ ಉದ್ದೇಶಕ್ಕಾಗಿ ಪ್ರಕೃತಿಯ ಅವನತಿಗಾಗಿ ಪೂರಕವಾದ ಹೂವುಗಳನ್ನು ಬಳಸಿದ್ದು ಅಕ್ಷಮ್ಯ ಅಪರಾಧ.



# ಬಂಧನವಿಲ್ಲದೆ ಪ್ರೀತಿಸಿ..

• ಕೆ.ಟಿ. ಮಲ್ಲಿಕಾರ್ಜುನಯ್ಯ, ಕೊರಟಗೆರೆ

ಪ್ರೀತಿ ಮತ್ತು ಬಾಂಧವ್ಯಗಳು ಶತಮಾನಗಳಿಂದ ಮಾನವೀಯತೆಯನ್ನು ಆಕರ್ಷಿಸುವ ಪರಿಕಲ್ಪನೆಗಳು. ಅವು ನಮ್ಮ ಸಂಬಂಧಗಳಲ್ಲಿ ಹೆಣೆದುಕೊಂಡಿವೆ. ನಮ್ಮ ಗ್ರಹಿಕೆಗಳು, ನಡವಳಿಕೆಗಳು ಮತ್ತು ಭಾವನಾತ್ಮಕ ಅನುಭವಗಳನ್ನು ರೂಪಿಸುತ್ತವೆ. ಪ್ರೀತಿಯು, ಬೆಳವಣಿಗೆ ಮತ್ತು ಸಂಪರ್ಕವನ್ನು ಬೆಳೆಸುತ್ತದೆ. ಬಾಂಧವ್ಯವು ಕೆಲವೊಮ್ಮೆ ಅವಲಂಬನೆ ಮತ್ತು ಅಭದ್ರತೆಯನ್ನು ಉಂಟುಮಾಡುತ್ತದೆ. ತಿಲ ಹಾಗೂ ಲೋಚನ್, ಪರಸ್ಪರ ತಂದೆ ಹಾಗೂ ತಾಯಿಯರು ನಿಶ್ಚಯಿಸಿ ಒಂದುಗೂಡಿದ ದಂಪತಿಗಳು. ಪರಸ್ಪರರು ಒಬ್ಬರನ್ನೊಬ್ಬರು ಗೌರವಿಸುತ್ತಾ ಮಕ್ಕಳೊಂದಿಗೆ ಸಂತೋಷದಿಂದ ಜೀವಿಸುತ್ತಿದ್ದಾರೆ. ಪ್ರೀತಿಯಲ್ಲಿ ಇಬ್ಬರು ಸಮಾನ ಸುಖಿಗಳು. ಏನೇ ಭಿನ್ನಾಭಿಪ್ರಾಯಗಳಿದ್ದರೂ ಕೂತು ಚರ್ಚಿಸಿ ಪರಿಹಾರಗಳನ್ನು ಜತೆಗೂಡಿ ಕಂಡುಕೊಳ್ಳುತ್ತಿರುವವರು. ಎರಡು ಕಡೆಯ ಸಂಬಂಧಗಳನ್ನು ಮತ್ತು ಸ್ನೇಹಿತರನ್ನು ಸಮಾನವಾಗಿ ಕಾಣುತ್ತಾ ಪ್ರೀತಿಯಿಂದಿರುವ ದಂಪತಿಗಳು.

ವಿಭಾ ತನ್ನ ಗಂಡ ಸಂಜೆ ಸ್ವಲ್ಪ ಲೇಟಾಗಿ ಕೆಲಸದಿಂದ ಬಂದರೆ ಸಿಡಿಮಿಡಿಕೊಳ್ಳುವಳು. ಹತ್ತು ಹಲವಾರು ಪ್ರಶ್ನೆಗಳನ್ನು ಕೇಳುತ್ತಾ, ಉತ್ತರಕ್ಕೂ ಕಾಯದೆ ತನ್ನ ಕೋಪವನ್ನು ಮಕ್ಕಳು ಹಾಗೂ ಪಾತ್ರೆಗಳ ಮೇಲೆ ತೀರಿಸಿಕೊಳ್ಳಲೆತ್ನಿಸುವಳು. ತನಗೆ ಹಾಗೂ ತನ್ನ ಮಕ್ಕಳಿಗೆ ಮಾತ್ರ ಹೊಸ ಬಟ್ಟೆಗಳನ್ನು ಕೊಳ್ಳಲು ಪ್ರೇರೇಪಿಸುವಳು. ಗಂಡ ಆತನ ತಂದೆ-ತಾಯಿ, ಅಕ್ಕ ತಂಗಿಯರಿಗೆ ಏನಾದರೂ ಸಹಾಯ ಮಾಡಲು ಪ್ರಯತ್ನಿಸಿದರೆ ಮುಗಿಯಿತು. ರಂಪಾ ರಾಮಾಯಣ ಶುರು. ವ್ಯವಹಾರ ನಿಮಿತ್ತ ಸ್ನೇಹಿತರೊಂದಿಗೆ ಫೋನಿನಲ್ಲಿ ಸ್ವಲ್ಪ ಹೆಚ್ಚೆನಿಸುವಂತೆ ಮಾತನಾಡುವಂತಿಲ್ಲ.

ಮೊದಲನೆಯ ಸನ್ನಿವೇಶದಲ್ಲಿ ನಾವು ಪ್ರೀತಿಯ ಕುಟುಂಬವನ್ನು ಕಂಡರೆ, ಎರಡನೆಯ ಸನ್ನಿವೇಶದಲ್ಲಿ ಬಾಂಧವ್ಯದ ಕುಟುಂಬವನ್ನು ಕಾಣಬಹುದು. ಪ್ರೀತಿಯಲ್ಲಿ ಬೇರೆಯವರ ಸಂತೋಷದೊಂದಿಗೆ ತನ್ನ ಸಂತೋಷವನ್ನು ಕಾಣುತ್ತಾರೆ. ಆದರೆ ಬಾಂಧವ್ಯದಲ್ಲಿ ತನ್ನ ಸಂತೋಷ ಮಾತ್ರ ಮುಖ್ಯ, ಬೇರೆಯವರ ಸಂತೋಷ ನಗಣ್ಯ ಹಾಗೂ ಸ್ವಾರ್ಥ, ಪೊಸೆಸಿವ್ನೆಸ್ ಎದ್ದು ಕಾಣುವಂತಿರುತ್ತದೆ.

### ಬಾಂಧವ್ಯ ಹೇಗೆ ರೂಪುಗೊಳ್ಳುತ್ತದೆ?

ಈತ/ಈಕೆ ನನಗೆ ಸರಿಯಾದ ವ್ಯಕ್ತಿ. ಈತ ಯಾವಾಗಲೂ ನನ್ನವನಾಗಿರಬೇಕು. ನಾನು ಯಾವಾಗಲೂ ಇವನ ಜತೆಯಲ್ಲೇ ಇರಬೇಕು. ನನ್ನ ಜೀವನದಿಂದ ಈತನನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡುವುದಿಲ್ಲ. ನನಗಾಗಿ ಮಾತ್ರ ಈತ ಎಂಬ ಭಾವನೆಯೊಂದಿಗೆ ತುಂಬಾ ಬಿಗಿಯಾಗಿ ಹಿಡಿದಿಟ್ಟುಕೊಳ್ಳುವುದು. ಪ್ರತಿಯೊಂದಕ್ಕೂ ನಿರ್ಬಂಧಗಳನ್ನು ಹೇರುವುದು. ಅತಿಯಾದ ರಕ್ಷಣಾ ಭಾವವನ್ನು ತೋರುವುದು. ಕೊನೆಗೆ ಮನೆಯಿಂದ ಹೊರಬರಲು ಅನುಮತಿಯನ್ನು ಕೇಳಿಯೇ ಹೊರ ಬರಬೇಕಾದ ಸಂದರ್ಭವನ್ನು ಸೃಷ್ಟಿಸುವುದು.

ಯಾವಾಗ ಅತಿಯಾದ ನಿಯಂತ್ರಣವನ್ನು ಹೇರಲು ಹೊರಡುತ್ತೇವೆಯೋ ಆಗ ಎದುರಿನ ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯವು ಹರಣವಾದಂತೆಯೇ ಸರಿ. ಅತಿಯಾದ ಬಿಗಿಹಿಡಿತವು ಅಷ್ಟೇ ಪ್ರಮಾಣದಲ್ಲಿ ಹಿಡಿತದಿಂದ ಹೊರಬರುವುದು ಶತ:ಸಿದ್ಧ. ಬುದ್ಧ ಹೇಳುತ್ತಾನೆ, 'ನೀನು ನಿನ್ನ ಜೀವನವನ್ನು ಮಾತ್ರ ಜೀವಿಸಬಲ್ಲೆ ಬೇರೆಯವರ ಜೀವನವನ್ನಲ್ಲ. ಸುಖ, ದುಃಖ, ಒಂಟಿತನಗಳು ನಿನ್ನದೇ ಹೊರತು ಬೇರೆಯವರದಲ್ಲ. ನಿನ್ನಿಂದ ನಿರ್ಮಿತವಾದ ಪ್ರಪಂಚ ಅದು ನಿನ್ನದೇ. ಬೇರೆಯವರ ಮೇಲೆ ನಿರ್ಬಂಧಗಳನ್ನು ಹೇರುವುದು ಸ್ವಭಾವತ: ಒಳ್ಳೆಯದಲ್ಲ. ಯಾರು ಸಹ ಇನ್ನೊಬ್ಬರ ನಿಯಂತ್ರಣದಲ್ಲಿ ಇರಲು ಇಚ್ಛಿಸುವುದಿಲ್ಲ. ಅವರವರ ಜೀವನಕ್ಕೆ ಎಲ್ಲರೂ ಸ್ವತಂತ್ರ ಪ್ರಿಯರು. ಯಾರು ಸಹ ಈ ಪ್ರಪಂಚದಲ್ಲಿ ಶಾಶ್ವತವಲ್ಲ. ಬದಲಾವಣೆ ಜಗದ ನಿಯಮ ಬದಲಾಗುತ್ತಲೇ ಇರುತ್ತದೆ ಎಲ್ಲವೂ.'

### ಪ್ರೀತಿಯಿಂದ ಬದುಕೋಣ..

ನಿಜವಾದ ಪ್ರೀತಿಗೆ ಇದೆಲ್ಲವೂ ಗೊತ್ತಿರುತ್ತದೆ. ನಾವು ಪ್ರೀತಿಸುವ ಹಾಗೂ ನಮ್ಮನ್ನು ಪ್ರೀತಿಸುವ ಪ್ರತಿಯೊಬ್ಬರು ಒಂದಲ್ಲ ಒಂದು ದಿನ ನಮ್ಮಿಂದ ದೂರವಾಗಲೇಬೇಕು ದೂರವಾಗುತ್ತಾರೆ ಕೂಡ. ಜೀವನ ತುಂಬಾ ಚಿಕ್ಕದು. ಇರುವಷ್ಟು ದಿನ ಪ್ರೀತಿಯಿಂದ ಎಲ್ಲರನ್ನು ಎಲ್ಲವನ್ನು ಪ್ರೀತಿಸೋಣ. ಪ್ರತಿಯೊಬ್ಬರೂ ಈ ಜೀವನದಲ್ಲಿ ಬಳಲುವವರೇ. ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು, ಬೇರೆಯವರ ಭಾವನೆಗಳನ್ನು ಗೌರವಿಸುತ್ತಾ, ಅತಿಯಾದ ಭಾಂದವ್ಯವನ್ನು ಬೆಳೆಸಿಕೊಳ್ಳದೆ, ಪ್ರೀತಿಯಿಂದ ಬದುಕೋಣ.

**ಪ್ರೀತಿ ಇಲ್ಲದ ಮೇಲೆ**
**ಹೂವು ಅರಳೀತು ಹೇಗೆ?**
**ಮೋಡ ಕಟ್ಟೀತು ಹೇಗೆ?**

ಎನ್ನುವ ಜಿ.ಎಸ್. ಶಿವರುದ್ರಪ್ಪನವರ ಪದ್ಯ ಪ್ರೀತಿಯ ಔಚಿತ್ಯವನ್ನು ಎಷ್ಟೊಂದು ಸೊಗಸಾಗಿ ಸಾರುತ್ತವೆ ಅಲ್ಲವೇ. ಪ್ರೀತಿ ಮತ್ತು ಬಾಂಧವ್ಯಗಳ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳುವ ಮೂಲಕ ಪರಸ್ಪರ ಗೌರವ ಸಹಾನುಭೂತಿ ಮತ್ತು ನಿಜವಾದ ಪ್ರೀತಿಯಲ್ಲಿ ನೆಲೆಕೊಂಡಿರುವ ಸಂಬಂಧಗಳನ್ನು ಬೆಳೆಸಿಕೊಳ್ಳೋಣ.



# ಬಾಕ್ಸಿಂಗ್‌ನಲ್ಲಿ ಬಂಗಾರ ಗೆದ್ದ ಅಮೇರಿಕನ್ನಡಿಗ ಅವಿನಾಶ್ ಬೆಂಕಿ

ಕದನ ಕಲೆ, ಕಾಳಗದ ಕ್ರೀಡೆ ಅನ್ನಿಸಿರುವ ಬಾಕ್ಸಿಂಗ್ ಅತಿ ಹೆಚ್ಚು ಸವಾಲುಗಳುಳ್ಳ ಕ್ರೀಡೆಯೂ ಹೌದು. ಇಂತಹ ಕ್ಷೇತ್ರದಲ್ಲೇ ಅದ್ಭುತ ಸಾಧನೆಗೈದವರು ಭಾರತೀಯ ಮೂಲದ, ಅಮೇರಿಕಾದಲ್ಲಿ ನೆಲೆಸಿರುವ ಅವನೀಶ್ ಬೆಂಕಿ. ಅಮೆರಿಕದಲ್ಲಿ ನಡೆದ, ರಾಷ್ಟ್ರೀಯ ಕಾಲೇಜ್ ಬಾಕ್ಸಿಂಗ್ ಟೂರ್ನಮೆಂಟ್‌ನಲ್ಲಿ ಅವನೀಶ್ ಬೆಂಕಿ, ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಚಿಕ್ಕ ವಯಸ್ಸಿನಲ್ಲೇ ಸಾಧನೆಗೈದಿರುವ 20 ವರ್ಷದ ಅವನೀಶ್ ಬೆಂಕಿ, ಕಳೆದ ವರ್ಷವೂ ಚಾಂಪಿಯನ್ ಆಗಿದ್ದರು. ಈ ಬಾರಿ ಏಪ್ರಿಲ್ 11ರಿಂದ 13ರವರೆಗೆ ಶಾರ್ಲೆಟ್ ನಾರ್ತ್ ಕ್ಯಾರೋಲಿನ್‌ದ, ಅಮೆರಿಕಾದ ನ್ಯಾಷನಲ್ ಕಾಲೇಜಿಯಟ್ ಬಾಕ್ಸಿಂಗ್ ಟೂರ್ನಮೆಂಟ್‌ನಲ್ಲಿ, 119 ಪೌಂಡ್ ವಿಭಾಗ ದಲ್ಲಿ,2ನೇ ಬಾರಿ ಚಿನ್ನದ ಪದಕವನ್ನು ಗೆದ್ದಿದ್ದಾರೆ.

ಅವನೀಶ್ ಬೆಂಕಿ ಫೈನಲ್ ಪಂದ್ಯದಲ್ಲಿ ಯುನಿವರ್ಸಿಟಿ ಆಫ್ ಕನ್ನೆಕ್ಟಿಕಟ್‌ನ ಬಾಕ್ಸರ್ ಹೆಡನ್ ಈಸ್ಟಮನ್ ಅವರನ್ನು ಸೋಲಿಸಿ ಚಿನ್ನದ ಪದಕವನ್ನು ಗೆದ್ದು ವಿಜಯೋತ್ಸವ ಆಚರಿಸಿದರು. ಇದಕ್ಕೂ ಮೊದಲು ಅವನೀಶ್ ಸೆಮಿ ಫೈನಲ್‌ನಲ್ಲಿ ಕ್ಯಾಲಿಫೋರ್ನಿಯಾ ರಾಜ್ಯದ ಸಂತಾಕ್ಲೇರ ಯುನಿವರ್ಸಿಟಿಯ ಇತನ್ ಚುಂಗ್ ಅವರನ್ನು ಸೋಲಿಸಿದ್ದರು. ಅವನೀಶ್ ಬೆಂಕಿ ಕರ್ನಾಟಕ ಮೂಲದ, ಅಪ್ಪಟ ಕನ್ನಡ ಪ್ರೇಮಿ ಬೆಂಕಿ ಬಸಣ್ಣ ಮತ್ತು ಉಮಾ ಅವರ ಹೆಮ್ಮೆಯ ಪುತ್ರ. ಇವರು ವಿಶ್ವವಿಖ್ಯಾತ ಪ್ರತಿಷ್ಠಿತ ಯುನೈಟೆಡ್ ಸ್ಟೇಟ್ಸ್ ಮಿಲ್ಟ್ರಿ ಅಕಾಡೆಮಿ ವೆಸ್ಟ್ ಪಾಯಿಂಟ್ ಕಾಲೇಜಿನ ಎರಡನೇ ವರ್ಷದ ವಿದ್ಯಾರ್ಥಿಯಾಗಿದ್ದಾರೆ. ಅವನೀಶ್ ತನ್ನ ಕಾಲೇಜು ಜೀವನದ ಎರಡು ವರ್ಷಗಳಲ್ಲಿ, ತನ್ನ ತೂಕದ ಕೆಟಗರಿಯಲ್ಲಿ, ಸತತವಾಗಿ ಎರಡನೇ ಬಾರಿಯೂ ಚಿನ್ನದ ಪದಕ ಗೆಲ್ಲುತ್ತಿರುವುದು ಹೆಮ್ಮೆಯ ವಿಷಯ.



ಅವನೀಶ್ ಬೆಂಕಿ, ನಾವು ವಿಶ್ವ ಕನ್ನಡಿಗರು (ನಾವಿಕ) ಸಂಸ್ಥೆಯ ಯೂಥ್ ಪ್ರೋಗ್ರಾಮ್‌ಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಕೋವಿಡ್ ಮಹಾಮಾರಿಯ ಸಮಯದಲ್ಲಿ ಕರ್ನಾಟಕದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಲ್ಯಾಪ್ಟಾಪ್ ದೇಣಿಗೆ ನೀಡುವ ಜ್ಞಾನ ದೀವಿಗೆ ಕಾರ್ಯಕ್ರಮದಲ್ಲಿ, ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಹಾಗೆಯೇ ಆಲ್ಬನಿ ಕನ್ನಡ ಸಂಘದ ಹಲವಾರು ಕಾರ್ಯಕ್ರಮಗಳಲ್ಲಿ ಚಿಕ್ಕಂದಿನಿಂದಲೂ ಭಾಗವಹಿಸಿದ್ದಾರೆ.



### ಬೆಳೆಯುವ ಸಿರಿ ಮೊಳಕೆಯಲ್ಲಿ

ಈ ಹಿಂದೆ 2013ರಲ್ಲಿ ಕೇವಲ ಒಂಬತ್ತು ವರ್ಷದವನಾಗಿದ್ದಾಗ ತೈ ಕ್ವಾನ್ ಡೊನಲ್ಲಿ ಅವನೀಶ್ ಬೆಂಕಿ ಬ್ಲಾಕ್ ಬೆಲ್ಟ್ ಪಡೆದಿದ್ದರು. ಹಾಗೆಯೇ ಫ್ಲೋರಿಡಾ ರಾಜ್ಯದ ಫೋರ್ಟ್ ಲಾಡರ್ ಡೇಲ್‌ನಲ್ಲಿ ನಡೆದ ಅಮೇರಿಕಾದ ನ್ಯಾಷನಲ್ ಲೆವೆಲ್ ತೈ ಕ್ವಾನ್ ಡೊನಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದರು. ಇದರ ಜತೆಗೆ ಟೆನ್ನಿಸ್ ಕ್ರೀಡೆಯಲ್ಲೂ ಒಳ್ಳೆಯ ಆಟಗಾರನಾಗಿರುವ ಅವನೇಶ್ ನ್ಯೂ ಯಾರ್ಕ್ ರಾಜ್ಯಮಟ್ಟದ ಟೆನಿಸ್ ಟೂರ್ನಮೆಂಟ್‌ನಲ್ಲಿ, ನಿಷ್ಕಯುನ ಹೈಸ್ಕೂಲ್‌ನ ಕ್ಯಾಪ್ಟನ್ ಆಗಿ ಪ್ರತಿನಿಧಿಸಿದ್ದರು. ಅವನೀಶ್ ಒಳ್ಳೆಯ ಓಟಗಾರ (ಸ್ಪ್ರಿಂಟರ್) ಆಗಿದ್ದು, 400 ಮೀಟರ್, 800 ಮೀಟರ್, ಕ್ರಾಸ್ ಕಂಟ್ರಿ ರನ್ನಿಂಗ್, ರಿಲೇ ರೇಸ್, ಹಾಫ್ ಮ್ಯಾರಥಾನ್, ಮುಂತಾದ ಸ್ಪರ್ಧೆಗಳಲ್ಲಿ ತನ್ನ ಹೈಸ್ಕೂಲ್ ಪರವಾಗಿ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.